सत्यमेव जयते

## ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ನಡವಳಿಗಳು

ವಿಷಯ: ನಗರ ಸ್ಥಳಿಯ ಸಂಸ್ಥೆಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಸದಸ್ಯ ಸ್ಥಾನಗಳಿಗೆ ಉಪಚುನಾವಣೆ ಸಂಬಂಧವಾಗಿ ಬಾಗಲಕೋಟೆ ಜಿಲ್ಲೆಯ ಇಳಕಲ್ ನಗರ ಸಭೆಗೆ ದಿನಾಂಕ 12-06-2017 ರಂದು ಹೊರಡಿಸಿರುವ ಆದೇಶವನ್ನು ರದ್ದುಪಡಿಸುವ ಬಗ್ಗೆ.

ಉಲ್ಲೇಖ:
1. ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ, ರವರ ಆದೇಶ ಸಂಖ್ಯೆ ಕ್ರ/ಕಂವಿ/ಚುನಾವಣೆ/ಸಿಆ4ರ್-41/2016-17 ದಿನಾಂಕ.19-09-2016 ಮತ್ತು ವರದಿ ದಿನಾಂಕ: 8-11-2016.
2. ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠದ ರಿಟ್ ಅರ್ಜಿ ಸಂಖ್ಯೆ : 108244/2016 ಮತ್ತು 108839/2016. ದಿನಾಂಕ. 03-10-2016.
3. ಆಯೋಗದ ಆದೇಶ ಸಂಖ್ಯೆ ರಾಚುಆ 27 ಇಯುಬಿ 2017 ದಿ: 12-6-2017.
4. ಜಿಲ್ಲಾಧಿಕಾರಿಗಳ ವರದಿ ಪತ್ರ ಸಂಖ್ಯೆ: ಕಂವಿ./ಚುನಾವಣೆ / ಸಿಆರ್.-41/2016-17. ದಿನಾಂಕ 30-06-2017
5. ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಪೀಠದ ರಿಟ್ ಅರ್ಜಿ ಸಂಖ್ಯೆ: 108244/2016 ಮತ್ತು 108839/2016, ದಿನಾಂಕ. 29-06-2017ರ ಆದೇಶ

*******

**ಪ್ರಸ್ತಾವನೆ :-**

ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಸದಸ್ಯ ಸ್ಥಾನಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ಬಾಗಲಕೋಟೆ ಜಿಲ್ಲೆ ರವರು ಉಲ್ಲೇಖ(1) ರನ್ವಯ ಬಾಗಲಕೋಟೆ ಜಿಲ್ಲೆಯ, ಹುನಗುಂದ ತಾಲ್ಲೂಕಿನ ಇಳಕಲ್ ನಗರ ಸಭೆಯ ವಾರ್ಡ್ ನಂ. 13ರ ಸದಸ್ಯರಾದ ಶ್ರೀಮತಿ ಹೇಮಲತಾ ಸುಗರೇಶ ನಾಗಲೂಟಿ ಹಾಗೂ ವಾರ್ಡ್ ನಂ. 24 ರ ಸದಸ್ಯರಾದ ಶ್ರೀ ಹುಸೇನ್‌ಸಾಬ್ ಶಾಮಿದಸಾಬ್ ಭಾಗವಾನ್ ರವರ ಸದಸ್ಯತ್ವವನ್ನು ಕರ್ನಾಟಕ ಸ್ಥಳಿಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇದ) ಅಧಿನಿಯಮ, 1987 ರ ತಿದ್ದುಪಡಿ ಅಧಿನಿಯಮ 1995 ಕಲಂ 4 (2) (iii)ರನ್ವಯ ದಿ:19-9-2016 ರಂದು ಅನರ್ಹಗೊಳಿಸಿದ್ದು, ತೆರವಾದ ಸದರಿ 2 ಸದಸ್ಯ ಸ್ಥಾನಗಳನ್ನು ತುಂಬಲು ಚುನಾವಣೆ ನಡೆಸುವ ಕುರಿತು ದಿನಾಂಕ: 08-11-2016ರ ಪತ್ರದ ಮೂಲಕ ಆಯೋಗದ ಅವಗಾಹನೆಗೆ ವರದಿ ಸಲ್ಲಿಸಿರುತ್ತಾರೆ.

ಸದರಿ ಅನರ್ಹಗೊಂಡ ಇಬ್ಬರು ಸದಸ್ಯರು ಜಿಲ್ಲಾಧಿಕಾರಿಗಳ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ದಿ.03-10-2016 ರಂದು ರಿಟ್ ಅರ್ಜಿ ಸಂಖ್ಯೆ : 108244/2016 ಮತ್ತು 108839/2016 ರಂತೆ ಪ್ರಕರಣ ದಾಖಲಿಸಿರುತ್ತಾರೆ. ಸದರಿ ಪ್ರಕರಣಗಳಲ್ಲಿ ಯಾವುದೇ ತಡೆಯಾಜ್ಞೆ ಇಲ್ಲದ ಕಾರಣ, ಆಯೋಗವು ಉಲ್ಲೇಖ(3) ರಂತೆ ತೆರವಾದ ಸದರಿ 2 ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಡೆಸಲು ತೀರ್ಮಾನಿಸಿ ದಿ:12-6-2017 ರಂದು ಚುನಾವಣಾ ವೇಳಾ ಪಟ್ಟಿಯನ್ನು ಹೊರಡಿಸಿರುತ್ತದೆ. ಅದರಂತೆ, ಜಿಲ್ಲಾಧಿಕಾರಿಗಳು, ಬಾಗಲಕೋಟೆ ರವರು ದಿ:14-6-2017 ರಂದು ಬಾಗಲಕೋಟೆ ಜಿಲ್ಲೆಯ, ಇಲಕಲ್ ನಗರ ಸಭೆಯ, ವಾರ್ಡ್ ನಂ. 13 ಹಾಗೂ 24 ಕ್ಕೆ ದಿ:2-7-2017 ರಂದು ಉಪಚುನಾವಣೆ ನಡೆಸಲು ಚುನಾವಣಾ ಅಧಿಸೂಚನೆ ಹೊರಡಿಸಿರುತ್ತಾರೆ.

ಉಲ್ಲೇಖ (4) ರಂತೆ ಜಿಲ್ಲಾಧಿಕಾರಿಗಳು ಆಯೋಗಕ್ಕೆ ವರದಿ ಸಲ್ಲಿಸಿ, ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ ಕ್ರ ಬಿಕೆಟಿ ಚುನಾವಣೆ ಸಿಆರ್ 41/2016-17 ದಿ:19-09-2016 ನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ: 108244/2016 ಮತ್ತು 108839/2016ನ್ನು ಪುರಸ್ಕರಿಸಿ ಸದರಿ ಜಿಲ್ಲಾಧಿಕಾರಿಗಳ ಆದೇಶವನ್ನು ರದ್ದುಪಡಿಸಲಾಗಿದೆ ಎಂದು ಅಡ್ವೋಕೇಟ್ ಜನರಲ್‌ರವರ ಘಟಕ ಕಛೇರಿ, ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠ ಇವರು ಇ-ಮೇಲ್ ಸಂದೇಶವನ್ನು ದಿನಾಂಕ: 30-06-2017 ರಂದು ಕಳುಹಿಸಿರುತ್ತಾರೆಂದು ತಿಳಿಸಿ, ನ್ಯಾಯಾಲಯದ ಆದೇಶದ ಪ್ರಕಾರ ಸದರಿ ಚುನಾವಣೆ ಜರುಗಿಸುವ ಕುರಿತು ಸೂಕ್ತ ನಿರ್ದೇಶನ ನೀಡಲು ಕೋರಿರುತ್ತಾರೆ.

ರಿಟ್ ಅರ್ಜಿ ಸಂಖ್ಯೆ: 108244/2016 ಮತ್ತು 108839/2016 ರಲ್ಲಿ ಮಾನ್ಯ ಉಚ್ಚನ್ಯಾಯಾಲಯ ಧಾರವಾಡ ಪೀಠದಲ್ಲಿ ದಿನಾಂಕ 29-06-2017 ರಂದು ಹೊರಡಿಸಿರುವ ಆದೇಶವನ್ನು ಓದಲಾಗಿದ್ದು ಸದರಿ ಆದೇಶದಲ್ಲಿ ಜಿಲ್ಲಾಧಿಕಾರಿಗಳ ಆದೇಶವನ್ನು ರದ್ದುಪಡಿಸಿರುವುದನ್ನು ಗಮನಿಸಲಾಗಿದೆ. ಹಾಗೂ ಬಾಗಲಕೋಟೆ ಜಿಲ್ಲೆಯ ಇಳಕಲ್ ನಗರ ಸಭೆಯ ವಾರ್ಡ್ ನಂ. 13 ಮತ್ತು 24 ರ ಸದಸ್ಯ ಸ್ಥಾನಗಳು ಖಾಲಿಯಾಗದಿರುವುದನ್ನು ಸದರಿ ಆದೇಶದಿಂದ ಮನದಟ್ಟು ಮಾಡಿಕೊಂಡು ಈ ಕೆಳಕಂಡಂತೆ ಆದೇಶ ನೀಡಿದೆ.

**<u>ಆದೇಶ ಸಂಖ್ಯೆ : ರಾಚುಆ 27 ಇಯುಬಿ 2017, ದಿನಾಂಕ:30-06-2017</u>**

**ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಭಾರತ ಸಂವಿಧಾನದ ಅನುಚ್ಛೇದ 243 (ಕೆ) ಮತ್ತು 243 (ಜಡ್ ಎ) ರಲ್ಲಿ ರಾಜ್ಯ ಚುನಾವಣಾ ಆಯೋಗಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ರಾಜ್ಯ ಚುನಾವಣಾ ಆಯೋಗವು ದಿ:12-6-2017 ರಂದು 11 ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳ 14 ವಾರ್ಡುಗಳಿಗೆ ಹೊರಡಿಸಲಾಗಿದ್ದ ಆದೇಶದಲ್ಲಿ, ಬಾಗಲಕೋಟೆ ಜಿಲ್ಲೆಯ, ಹುನಗುಂದ ತಾಲ್ಲೂಕಿನ, ಇಲಕಲ್ ನಗರಸಭೆಯ ವಾರ್ಡ್ ನಂ. 13 ಮತ್ತು 24 ಕ್ಕೆ ಸಂಬಂಧಿಸಿದಂತೆ ಮಾತ್ರ ಉಪ ಚುನಾವಣೆ ನಡೆಸಲು ಹೊರಡಿಸಲಾಗಿದ್ದ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ. ಅಂತೆಯೇ ಬಾಗಲಕೋಟೆ ಜಿಲ್ಲೆಯ, ಹುನಗುಂದ ತಾಲ್ಲೂಕಿನ, ಇಲಕಲ್ ನಗರ ಸಭೆಯ ವಾರ್ಡ್ ನಂ. 13 ಮತ್ತು 24 ಕ್ಕೆ ಹೊರಡಿಸಿದ್ದ ಮಾದರಿ ನೀತಿ ಸಂಹಿತೆಯನ್ನು ಸಹ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿದೆ.**

" ಆದೇಶಾನುಸಾರ "

ಅಧೀನ ಕಾರ್ಯದರ್ಶಿ

ರಾಜ್ಯ ಚುನಾವಣಾ ಆಯೋಗ.

30/6/17

<u>ಪ್ರತಿಯನ್ನು :</u>

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳಿಹಿಸಿದೆ.
5. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ರವರಿಗೆ ಕಳುಹಿಸುತ್ತಾ ಈ ಆದೇಶವನ್ನು ಈ ದಿನವೇ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ 25 ಪ್ರತಿಗಳನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಕಳುಹಿಸಲು ಕೋರಿದೆ.
6. ನಿರ್ದೇಶಕರು, ಸಾರ್ವಜನಿಕ ಮತ್ತು ಸಂಪರ್ಕ ಇಲಾಖೆ, ವಾರ್ತಾಸೌದ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ